ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಶ್ರೀ ವೀರಭದ್ರೇಶ್ವರ ಗುಡಿಯ ಹತ್ತಿರ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಪಡಿಸಲು ತೋಟಗಾರಿಕೆ ಇಲಾಖೆ ಸಚಿವರು ಡಿಸ್ಟ್ರಿಕ್ ಅಗ್ರಿಕಲ್ಚರಲ್ ಆಫೀಸರ್ (ಜಿಲ್ಲಾ ಕೃಷಿ ನಿರ್ದೇಶಕರು) ಬೆಳಗಾವಿ ಇವರಿಗೆ ಆದೇಶ ನೀಡಿದ ಸಂಗತಿ ನಿಜವೆ ;

ಆ) ಹಾಗಿದ್ದರೆ ಡಿಸ್ಟ್ರಿಕ್ ಅಗ್ರಿಕಲ್ಚರಲ್ ಆಫೀಸರ್ ಬೆಳಗಾವಿ ಇವರು ತೋಟಗಾರಿಕೆ ಸಚಿವರ ಆದೇಶದ ಪ್ರಕಾರ ಅಲ್ಲಿ ಹೂದೋಟ ಮಾಡಲು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಎಂ. ಎಸ್. ಆತ್ಮಾನಂದ(ತೋಟಗಾರಿಕೆ ರಾಜ್ಯ ಸಚಿವರು):-

ಅ) ಮಾನ್ಯ ತೋಟಗಾರಿಕೆ ಸಚಿವರಿಂದ ವೀರಭದ್ರೇಶ್ವರ ಗುಡಿಯ ಹತ್ತಿರ ಹೂದೋಟ ಮಾಡಲು ಯಾವುದೇ ಆದೇಶ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೈಲಹೊಂಗಲ ನಗರದಲ್ಲಿ ಮೀನುಗಾರರಿಗೆ ಮೀನು ಮಾರುಕಟ್ಟೆ.

1574 (2296) ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ್)

ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಮೀನುಗಾರರಿಗೆ ಮೀನುಗಳನ್ನು ಮಾರಲು ಮಾರುಕಟ್ಟೆ, ಇಲ್ಲದೇ ಇರುದರಿಂದ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಮೀನುಗಾರರಿಗೆ ಮಾರುಕಟ್ಟೆ (ಮೀನುಗಳನ್ನು ಮಾರುವ ಒಂದು ಸ್ಥಳ) ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ಇ) ಮಲಪ್ರಭಾ, ನದಿಯಲ್ಲಿ ಮೀನುಗಾರರಿಗೆ ಮೀನನ್ನು ಹಿಡಿದು ಅವುಗಳನ್ನು ಬೇರೆ ಕಡೆಗೆ ಸಾಗಿಸಿ ಕೆಡದಂತೆ ಮಾಡಲು ಸರ್ಕಾರದಿಂದ ಸಹಾಯ ಧನವನ್ನು ನೀಡಲಾಗುವುದೇ ;

ಶ್ರೀ ಎ. ಎಂ. ಬೆಳ್ಳಿಯಪ್ಪ(ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು)-

ಅ) ಹೌದು.

ಆ) ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸುವುದು ಪುರಸಭೆಯ ವ್ಯಾಪ್ತಿಗೆ ಬರುತ್ತದೆ. ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವಂತೆ ಪುರಸಭೆಯನ್ನು ಕೇಳಿಕೊಳ್ಳಲಾಗುತ್ತಿದೆ.

ಇ) ಹಿಡಿದ ಮೀನನ್ನು ಅಲ್ಲೇ ಮಾರಾಟ ಮಾಡುವುದರಿಂದ ಸಾಗಾಣಿಕೆಗೆ ಧನ ಸಹಾಯವನ್ನು ಮಂಜೂರುಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಗ್ರಾಮದ ಸೌಲಭ್ಯಕ್ಕಾಗಿ ಸರ್ಕಾರದ ಭೂಮಿಯನ್ನು ಕಾಯ್ದಿರಿಸುವ ಕುರಿತು.

1576 (2302) ಶ್ರೀ ಬಿ. ಶಿವರಾಮು(ಗಂಡಸಿ)

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಗ್ರಾಮದ ಸುತ್ತಮುತ್ತಲಿನ ಸರ್ಕಾರಿ ಭೂಮಿಯಲ್ಲಿನ ಸ್ವಲ್ಪ ಭಾಗವನ್ನು ಗ್ರಾಮದ ಮುಂದಿನ ಸೌಲಭ್ಯಕ್ಕಾಗಿ ಕಾಯ್ದಿರಿಸುವ ಯೋಜನೆ ಏನಾದರೂ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಆ ಬಗ್ಗೆ ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?